ಎಂದು ಹೇಳುವುದನ್ನು ಕೇಳಿದ ಮೇಲೆ ಸಾಹಿತ್ಯವನ್ನು ಮಾಹಿತಿಗಾಗಿಯಲ್ಲ, ಲೋಕಗ್ರಹಿಕೆಗಾಗಿ ಮತ್ತು ಬಾಳಿನ ಅರ್ಥಶೋಧನೆಗಾಗಿ ಅಧ್ಯಯನಮಾಡಬೇಕಿದೆ ಎಂಬುದು ಮನದಟ್ಟಾಯಿತು. ಈ ಕೃತಿಯಲ್ಲಿ ಇಬ್ಬಾಯಲಗಿನ ಮೇಲೆ ಇಬ್ಬರು ವ್ಯಕ್ತಿಗಳು ಅಂಟಿಕೂತಿರುವ ಚಿತ್ರವಿದೆ. ಕೃತಿಯ ಹೆಸರನ್ನೇ ಚಿತ್ರದ ಮೂಲಕ ತೋರಿಸುವ ಯತ್ನವನ್ನು ಇಲ್ಲಿ ಮಾಡಲಾಗಿದೆ. ಈ ಚಿತ್ರದಲ್ಲಿ ಅಷ್ಟೇನೂ ಮಾರ್ಮಿಕತೆ ಇದ್ದಂತಿಲ್ಲ. ಅವರ 'ನಡೆದಷ್ಟೂ ನಾಡು' ಕೃತಿಯಲ್ಲಿರುವ ಚಿತ್ರ ಸಂವೇದನಾಶೀಲ ಮನಸುಗಳನ್ನು ಚಿಂತನಾಶೀಲರನ್ನಾಗಿಸಲು ಚೋದಿಸುತ್ತದೆ. ಜನ ತಮಗೆ ಆಸರೆಯಾಗುವ ಯಂತ್ರಗಳನ್ನು, ಪ್ರಾಣಿಗಳನ್ನು, ವಸ್ತುಗಳನ್ನು ತಮ್ಮ ಒಡನಾಡಿಗಳಂತೆಯೆ ಕಾಣುತ್ತಾರೆ. ಉತ್ತರಭಾರತದ ಮಳೆಯಪ್ರವಾಹದಂತಹ ಸಂದಿಗ್ಧದಲ್ಲೂ ನಾಯಿ, ಕುರಿ, ಬೆಕ್ಕು ಮುಂತಾದ ತಮ್ಮ ಪ್ರಿಯ ಪ್ರಾಣಿಗಳನ್ನು ಹೆಗಲ ಮೇಲೆ ಹೊತ್ತುಕೊಂಡೊ, ಎದೆಗಾನಿಸಿಕೊಂಡೊ ಸಾಗುವ ಚಿತ್ರಗಳನ್ನು ನೋಡುತ್ತಿದ್ದೇವೆ. 'ಮಲೆಗಳಲ್ಲಿ ಮದುಮಗಳು' ಕೃತಿಯಲ್ಲಿ ಬಚ್ಚ, ಪಾದ್ರಿ ಜೀವರತ್ನಯ್ಯನ ಆದೇಶದ ಮೇರೆಗೆ ಬೈಸಿಕಲ್ಲನ್ನು ಹೊತ್ತುಬರುವುದಕ್ಕೂ ಮುನ್ನ ಒಂದು ದೊಡ್ಡ ಪ್ರಹಸನಕ್ಕೇ ಈಡಾಗುತ್ತಾನೆ. ಆಧುನಿಕತೆಯ ಪ್ರವೇಶದಿಂದ ಮಲೆನಾಡಿನ ಜನರ ಜೀವನ ರೂಪಾಂತರ ಪಡೆಯುತ್ತಿದ್ದ ಈ ಸಂಗತಿ ಕಾದಂಬರಿಯಲ್ಲಿ ಶಬ್ದಾಂತರ ಹೊಂದಿ 'ಬೀಸುವ ಕಲ್ಲಿನ ಸವಾರಿ'ಯಾಗಿ ವಿನೋದಪೂರ್ಣವಾಗಿ ಚಿತ್ರಿತವಾಗಿದೆ. ಆದರೆ, 'ನಡೆದಷ್ಟೂ ನಾಡು' ಕೃತಿಯಲ್ಲಿರುವ ಸೈಕಲ್ ಹೊರುತ್ತಿರುವವನ ದೃಶ್ಯ ಲೋಕವನ್ನು ನೋಡಬೇಕಾದ ಮಾನವೀಯ ಜರೂರತ್ತನ್ನು ಸೂಚಿಸಲು ಪ್ರಯತ್ನಿಸುತ್ತಿದೆ. ಈ ಚಿತ್ರ ರಿಯಾಜ್ ನಲ್ಲಿ ನಗುವಿಗೆ ಬದಲಾಗಿ ಪ್ರಶ್ನೆಗಳನ್ನು ಮೊಳೆಯಿಸಬೇಕಿತ್ತು. ಇರಲಿ, ಒಂದೇ ಚಿತ್ರ ಒಬ್ಬೊಬ್ಬರಿಗೆ ಒಂದೊಂದು ತರ ಕಾಣುತ್ತದೆ. ಆಕಾಶದಲ್ಲಿರುವ ಒಬ್ಬನೆ ಚಂದ್ರ ಮಕ್ಕಳಿಗೆ ಚೆಂಡಾಗಿ, ಕವಿಗೆ ಮಡದಿಯ ಮೋರೆಯಾಗಿ, ವಿಜ್ಞಾನಿಗೆ ಕಲ್ಲುಗುಂಡಾಗಿ ಕಾಣುತ್ತದೆ ಎಂದು ವಿಡಂಬಿಸುವ ಪದ್ಯವೊಂದಿದೆ.

ಭಾರತವನ್ನು ಒಂದು ನಾಡಾಗಿ ನೋಡುವ ಈ 'ನಡೆದಷ್ಟೂ ನಾಡು' ಸ್ಥಳ, ವ್ಯಕ್ತಿ, ಕಾಡು, ನದಿಗಳನ್ನು ನೋಡುವಾಗ ವಹಿಸಬೇಕಾದ ಎಚ್ಚರವನ್ನು ಓದುಗರಿಗೆ ರವಾನಿಸುತ್ತದೆ. ಸೈಕಲ್ ಹೊತ್ತು ನಡೆಯುತ್ತಿರುವ ವ್ಯಕ್ತಿಯ ಚಿತ್ರಲೋಕವನ್ನು ನೋಡುವ ದೃಷ್ಟಿಕೋನದಲ್ಲಿ ಭಾವಸಂವೇದನೆಗಳನ್ನು ಜೀವಂತವಾಗಿಟ್ಟುಕೊಳ್ಳಲು ಒತ್ತಾಯಿಸುತ್ತದೆ. 'ನ್ಯಾಯನಿಷ್ಠುರಿಗಳ ಜತೆಯಲ್ಲಿ' ಮತ್ತು 'ಲೋಕವಿರೋಧಿಗಳ ಜತೆಯಲ್ಲಿ' ಆಧುನಿಕ ಕನ್ನಡ ಸಾಂಸ್ಕೃತಿಕ ಸಂದರ್ಭದ ಎರಡು ಮಹತ್ವದ ದಾಖಲೆಗಳು. 'ಲೋಕ ವಿರೋಧಿಗಳ ಜತೆಯಲ್ಲಿ' ಮುಖಪುಟದ ಮೇಲೆ ಗಜವೊಂದು ಗಂಭೀರವಾಗಿ ಸಂಚರಿಸುತ್ತಿರುವ ಚಿತ್ರವಿದೆ. ನನಗೆ ಪದೇ ಪದೇ ಕಾಡುವ ಎರಡು ಚಿತ್ರಗಳಲ್ಲಿ ಇದೂ ಒಂದು.

ರೈತಪರಹೋರಾಟಗಾರರು, ಚಳವಳಿಗಾರರು, ಮತ್ತು ಸಾಹಿತಿಗಳನ್ನು ಒಳಗೊಂಡ ಈ ಮಾತುಕತೆಗಳಲ್ಲಿ ತಮ್ಮದೆಯಾದ ಕ್ಷೇತ್ರಗಳಲ್ಲಿ ಆದರ್ಶ ಬಾಳಿಗಾಗಿ ತುಡಿದು ಅಂತೆಯೆ ಜೀವಮಾನ ಸವೆಸಿದ ಲೋಕವಿರೋಧಿಗಳ ಸಂದರ್ಶನಗಳಿವೆ. ಬಸವಣ್ಣನ ವಚನದಿಂದ ಆಯ್ದ ಈ ಸ್ಟೇಟ್ಮೆಂಟ್‌ಗಳು ಸಾಹಿತ್ಯ ಕ್ಷೇತ್ರದಲ್ಲಿ ನುಡಿಗಟ್ಟಿನ ರೂಪತಾಳಿವೆ. ಆನೆ ನಡೆದದ್ದೆ ದಾರಿ ಎಂಬುದು ನಾಣ್ಣುಡಿ. ಇದರಲ್ಲಿ ಬರುವ ಎಲ್ಲ ಆದರ್ಶವಾದಿಗಳು ಹೀಗೆಯೆ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಇಹದ ಬಾಳನ್ನು ಹಸನು ಮಾಡಲು ಜೀವನ ಸವೆಸಿದವರು. ಆದರೆ, ಇದನ್ನು ತಲುಪುವ ಮಾರ್ಗದಲ್ಲಿ ಉಂಟಾದ ಸಂಘರ್ಷಗಳ ಜೊತೆಯಲ್ಲಿ ಹೊಂದಾಣಿಕೆ ಮಾಡಿಕೊಂಡವರಲ್ಲ. ಆದ್ದರಿಂದ ಈ ಕರಿಘನದ ಚಿತ್ರ ಯತಾರ್ಥವಾಗಿದೆ. ಆ ಚಿತ್ರ ನೋಡಿದಾಗಲೆಲ್ಲ ಅದರೊಳಗಿರುವ ಚಿಂತಕರ ಮೇಲೆ ಅನಿರ್ವಚನೀಯ ಭಾವವೊಂದು ಸುಳಿದು ಹಾಯುತ್ತದೆ.

ಮೇಲೆ ಪದೆ ಪದೆ ಕಾಡುವ ಎರಡು ಚಿತ್ರಗಳೆಂದರೆ ದೇವನೂರರ ಕುಸುಮಬಾಲೆಯ ಮೇಲೆ ಇರುವ ಚಿತ್ರವನ್ನು ನೋಡಿದಾಗಲೆಲ್ಲ ನಾನು ಹುಟ್ಟಿ ಬೆಳೆದ ಹಟ್ಟಿಯ ನೆನಪಾಗುತ್ತದೆ. ಎರಡು ತೋಳಿನ ಕೆಂಪಂಚಿನ ಮನೆಗಳ ನಡುವೆ ಹಾದುಹೋಗುವ ರಸ್ತೆಯ ಮೇಲಿನ ಚಿತ್ರವದು; ಎರಡೂ ಬದಿಗೂ ತೆಂಗಿನ ಮರಗಳಿವೆ. ಜುಬುರಿಸುತ್ತ ನಿಂತಿರುವ ಹೋತಕ್ಕೆ ಹುಂಜವೊಂದು ಎದುರಾಗಿ ನಿಂತು ಅದರ ಮೇಲಿನ ಹುಣ್ಣೆಯನ್ನು ಶಿಕಾರಿ ಮಾಡಲು ಹೊಂಚುಹಾಕುತ್ತಿದೆ. ಕಡಿಯುತ್ತಿರುವ ಮೈಯನ್ನು ತನ್ನ ಹಲ್ಲುಗಳಿಂದ ಕೆರೆದುಕೊಳ್ಳುತ್ತಿರುವ